

ಮಥಿಯಸ್ ಚರ್ಚ್

ರಾಯಲ್ ಕ್ಯಾಸೆಲ್: ಡಾನ್ಯೂಬ್ ನದಿಯ ದಡದಲ್ಲಿ, ತನ್ನ ಅಗಾಧವಾದ ಪ್ರಭಾವವನ್ನು ಬೀರುತ್ತಿರುವ ಯುನೆಸ್ಕೊ ಮಾನ್ಯತೆ ಪಡೆದಿರುವ ರಾಯಲ್ ಕ್ಯಾಸೆಲ್ ಸಂಕೀರ್ಣ, ಬೂಡಪೆಸ್ಟ್‌ನ ಪ್ರಮುಖ ಆಕರ್ಷಣೆ.

ಯೂರೋಪಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ನಗರವೆಂದೂ ಹೆಸರುವಾಸಿಯಾಗಿರುವ ಬೂಡಪೆಸ್ಟ್‌ನ ಖ್ಯಾತಿಗೆ ಮೆರುಗು ಕೊಡುವಂತಿರುವ ರಾಯಲ್ ಪ್ಯಾಲೇಸಿನ ವಾಸ್ತುಶಿಲ್ಪವನ್ನೂ, ಅದರ ಭವ್ಯತೆಯನ್ನೂ, ಅಚ್ಚುಕಟ್ಟಾಗಿರುವ ಸಂಕೀರ್ಣದ ನಿರ್ವಹಣೆಯನ್ನೂ, ಅದೆಷ್ಟು ಬಣ್ಣಿಸಿದರೂ ಸಾಲದು. 13ನೇ ಶತಮಾನದಲ್ಲಿ ಮೂಲ ಪ್ಯಾಲೇಸ್ ನಿರ್ಮಿತವಾದರೂ, ನಿರಂತರವಾಗಿ ನಡೆಯುತ್ತಿದ್ದ ದಾಳಿಗಳಿಂದಲೂ, ಯುದ್ಧಗಳಿಂದಲೂ ನಾಶವಾಗುತ್ತಿತ್ತು. ಈಗಿರುವ ಪ್ಯಾಲೇಸ್ ಎರಡನೇ ಮಹಾಯುದ್ಧದ ನಂತರ ಮರುನಿರ್ಮಾಣವಾದದ್ದು. ಪಕ್ಕದಲ್ಲಿರುವ ಮಥಿಯಾಸ್ ಚರ್ಚ್ ಇನ್ನೊಂದು ಆಕರ್ಷಣೆ. ಚೈನ್ ಬ್ರಿಡ್ಜಿನಿಂದ ಪ್ಯಾಲೇಸಿಗೆ ಹೋಗಲು ಕೇಬಲ್ ರೈಲ್ (funicular railway) ವ್ಯವಸ್ಥೆಯಿದೆ.

## ಡಾನ್ಯೂಬ್ ಕ್ರೂಸ್

ಒಂದು ಗಂಟೆಯ ಧ್ವನಿ ಮತ್ತು ದೃಷ್ಟಿ (Sound and light) ಪ್ರದರ್ಶನದೊಂದಿಗೆ ಶುರುವಾಗುವ ಈ ಕ್ರೂಸ್, ಪ್ರವಾಸಿಗರಿಗೆ ರಾಜ ಮಹಾರಾಜರ, ಕವಿಗಳ, ಸಂಶೋಧಕರ ಸ್ವಾರಸ್ಯಕರ ಕಥೆಗಳನ್ನು ವಿವರಿಸುತ್ತಾ ಇಲ್ಲಿನ ಭವ್ಯ ಇತಿಹಾಸದ ಪರಿಚಯ ಮಾಡಿಸುತ್ತದೆ. ಎರಡೂ ಕಡೆಯ ಪ್ರಾಚೀನ ಕಟ್ಟಡಗಳ ವಿದ್ಯುತ್ ದೀಪಾಲಂಕಾರ, ನದಿಯ ನೀರಿನಲ್ಲಿ ಪ್ರತಿಬಿಂಬದ ದೃಶ್ಯ, ಬೂಡಪೆಸ್ಟ್‌ನ ಪ್ರಾಕೃತಿಕ ಸೌಂದರ್ಯವನ್ನು ಎತ್ತಿಹಿಡಿಯುತ್ತದೆ.

ರೂಯಿನ್ಡ್ ಪಬ್ಸ್: ಇನ್ನಿತರ ಯೂರೋಪ್ ರಾಷ್ಟ್ರಗಳಂತೆ ಇಲ್ಲಿನ ಬೆಲೆಗಳು ಅಷ್ಟೊಂದು ದಂಗುಬಡಿಸುವುದಿಲ್ಲ. ನಮ್ಮ ರೂಪಾಯಿಗೆ ಮರ್ಯಾದೆ ಕೊಡುವ ಕೆಲವೇ ದೇಶಗಳಲ್ಲಿ ಇದೂ ಒಂದು. ಈ ದೇಶದ ಕರೆನ್ಸಿಯನ್ನು ಫೋರಿಂಟ್ (Forint: HUF) ಎನ್ನುತ್ತಾರೆ. ಒಂದು ಫೋರಿಂಟಿಗೆ ಕೇವಲ ನಾಲ್ಕು ರೂಪಾಯಿ. ಈ ನಗರದಲ್ಲಿ ಬೀರ್ ಅತಿ ಅಗ್ಗ. ನಮ್ಮ ಐವತ್ತು ರೂಪಾಯಿಗೆ ಇಲ್ಲಿ ಬೀರ್ ಸೇವಿಸಬಹುದು. ಆದರೆ ಕಾಫಿ/ ಟೀ ಮಾತ್ರ ಬೀರ್‌ಗಿಂತ ದುಬಾರಿ!

ಬೆಂಗಳೂರು ಪಬ್ ಸಿಟಿಯೆಂದು ಹೆಸರುವಾಸಿ. ಆದರೆ, ಬೂಡಪೆಸ್ಟ್‌ನಲ್ಲಿರುವ ರೂಯಿನ್ಡ್ ಪಬ್‌ಗಳ (ruined pubs) ಪರಿಕಲ್ಪನೆಯೇ ಬೇರೆ. ಕುತೂಹಲದಿಂದ ಕೆಲವು ಪಬ್‌ಗಳನ್ನು ವೀಕ್ಷಿಸಲು ತೀರ್ಮಾನಿಸಿದೆವು.

ಇಲ್ಲಿನ ಪಬ್‌ಗಳಿಗೂ ಮತ್ತು ಜಗತ್ತಿನ ಎರಡನೇ ಮಹಾಯುದ್ಧಕ್ಕೂ ನೇರ ಸಂಬಂಧವಿದೆ. ಆ ಸಮಯದಲ್ಲಿ ಯಹೂದಿಗಳ ಮೇಲೆ ನಡೆದ ಕ್ರೌರ್ಯ ಮತ್ತು ಸಾಮೂಹಿಕ ಹತ್ಯಾಕಾಂಡದ ಭೀಕರ ಮತ್ತು ಜೀವಂತ ಚಿತ್ರಣವಿಲ್ಲಿದೆ. ನಗರದ ಮಧ್ಯಭಾಗದಲ್ಲಿರುವ ಯಹೂದಿಗಳೇ ಹೆಚ್ಚಾಗಿ ವಾಸಿಸುತ್ತಿದ್ದ ಪ್ರದೇಶವನ್ನು ಯುದ್ಧದಲ್ಲಿ ಧ್ವಂಸ ಮಾಡಲಾಗಿತ್ತು. ಸುಮಾರು ಶೇಕಡಾ 60ರಷ್ಟು ಯಹೂದಿಗಳ ಹತ್ಯಾಕಾಂಡವಾಗಿದ್ದ ಈ ಪ್ರದೇಶದ ಬೀದಿಗಳಲ್ಲಿರುವ ಕೆಲವು ಮನೆಗಳನ್ನು ಪಬ್‌ಗಳನ್ನಾಗಿ ಪರಿವರ್ತಿಸಲಾಗಿದೆ. ಹೊರಗಿನಿಂದ ಸಾಮಾನ್ಯವಾಗಿ ಕಾಣುವ ಈ ನೆರೆಹೊರೆಯಲ್ಲಿ ಯಾವುದೇ ಚಿಹ್ನೆಗಳಿಲ್ಲ, ಗದ್ದಲವಿಲ್ಲ. 2001ರಲ್ಲಿ ಸ್ಜಿಂಪ್ಲ ಕರ್ಟ್ ಹೆಸರಿನಲ್ಲಿ ಮೊದಲ ರೂಯಿನ್ಡ್ ಪಬ್ ಶುರುವಾಗಿ, ಕಾಲಕ್ರಮೇಣ ಈ ವಿನೂತನ ಪರಿಕಲ್ಪನೆ ಜನಪ್ರಿಯವಾಯಿತು.

ಇಲ್ಲಿನ ಗಲ್ಲಿಗಳಲ್ಲಿ ಓಡಾಡುತ್ತ,ನಾವೂ ಒಂದೆರಡು ಪಬ್‌ಗೆ ಹೋದೆವು.